**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**
**ಅಸಲು ದಾವಾ ಸಂಖ್ಯೆ . 288/2012, D.W.-2**

ದಿನಾಂಕಃ 26-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಹೆಚ್ ಎಸ್ ಎನ್ ವಕೀಲರಿಂದ ಃ-

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಲ್ ಪಿ ವಕೀಲರಿಂದ ಃ-

ಸರ್ವೆ ನಂ.35/3 ನ್ನು ನಾರಾಯಣಪ್ಪನವರು ಖರೀದಿ ಮಾಡಿದ್ದು, ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಅದರ ಅಳತೆ ನನಗೆ ಗೊತ್ತಿರುವುದಿಲ್ಲ. ಚಕ್ಕುಬಂದಿಯೂ ಸಹ ನನಗೆ ತಿಳಿದಿರುವುದಿಲ್ಲ. ದಾವ ಸ್ವತ್ತಿನ ಅಕ್ಕಪಕ್ಕ ನಿಮ್ಮ ಆಸ್ತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿದ್ದು, ಮುಂದುವರಿದು ನಾರಾಯಣಪ್ಪನವರು ನಮ್ಮ ಊರಿನವರು ಆಗಿರುತ್ತಾರೆಂದು ನುಡಿದಿರುತ್ತಾರೆ. ವಾದಿಯು ಪ್ರತಿವಾದಿಯಾದ ನಾರಾಯಣಪ್ಪನವರ ಆಸ್ತಿಯ ಮೇಲೆ ದಾವೆ ಹೂಡಿರುತ್ತಾರೆಂಬು ವಿಚಾರ ನನಗೆ ತಿಳಿದಿರುತ್ತದೆ. ವಾದಿಯು 35/6 ಸರ್ವೆ ನಂಬರ್ ಮೇಲೆ ದಾವೆಯನ್ನು ಹೂಡಿರುತ್ತಾರೆ. ನಾರಾಯಣಪ್ಪನವರು ಗಂಗಮ್ಮ ಮತ್ತು ಅವರ ಮಕ್ಕಳಿಂದ ನಿವೇಶನ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿಯು ಗಂಗಮ್ಮನ ತಂಗಿಯಾದ ಲಕ್ಷ್ಮಮ್ಮನವರಿಂದ ದಾವ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದು ನಿಮ್ಮ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ವಾದಿಯು ಲಕ್ಷ್ಮಮ್ಮನವರಿಂದ ಖರೀದಿ ಮಾಡಿದ ಸ್ವತ್ತಿನಲ್ಲಿ ಮನೆ ಇರುವ ಜಾಗ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಪ್ರತಿ ವಾದಿ ಮತ್ತು ಪ್ರತಿವಾದಿಯ ತಮ್ಮ ರಾಜಪ್ಪ ಎರಡು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಪ್ರತಿವಾದಿ ಮತ್ತು ಅವರ ತಮ್ಮ ಕಟ್ಟಿರುವ ಮನೆ ಗಂಗಮ್ಮನವರಿಂದ ಖರೀದಿ

ಮಾಡಿರುವ ಜಾಗ ಆಗಿರುತ್ತದೆ ಎಂದರೆ ಸರಿ. ಅಳತೆ 30 ಇಂಟು 60 ಅಡಿ ಬರಬಹುದು. ಪ್ರತಿವಾದಿ ಮತ್ತು ಅವರ ತಮ್ಮ ಮನೆ ಕಟ್ಟಿರುವ ಜಾಗ ಒಟ್ಟು ಸೇರಿ 40 ಇಂಟು 60 ಅಡಿ ಇರಬಹುದು. ಮನೆ ಕಟ್ಟಿರುವ ಒಟ್ಟು ಜಾಗ 70 ಇಂಟು 70 ಅಡಿ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಡಿ-1 ರ ಕ್ರಯಪತ್ರದ ಪ್ರಕಾರ ಪ್ರತಿವಾದಿ ನಾರಾಯಣರವರು 30 ಇಂಟು 70 ಅಡಿ ಜಾಗವನ್ನು ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ನಿಡಿ-1 ದಾಖಲಾತಿಯನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ಸರ್ವೆ ನಂ.35/1 ರಲ್ಲಿ ನಿಡಿ-4 ದಾಖಲಾತಿ ಪ್ರಕಾರ ಪ್ರತಿವಾದಿಯು 1.12 ಗುಂಟೆ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ದಾಖಲಾತಿಯನ್ನು ನೋಡಿ ಹೌದು ಎಂದು ನುಡಿದಿರುತ್ತಾರೆ. ಪ್ರತಿವಾದಿಯು ಖರೀದಿ ಮಾಡಿರುವ ಜಾಗಕ್ಕಿಂತ ಹೆಚ್ಚು ಜಾಗದಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ನನಗೆ ಅಳತೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಮನೆ ಕಟ್ಟಿರುವ ಪೂರ್ವದ ಕಡೆಗೆ ದಾವ ಸ್ವತ್ತು ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು 4 ವರೆ ಗುಂಟೆಯಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಒಂದು ಮುಕ್ಕಾಲು ಜಾಗವನ್ನು ಮಾತ್ರ ಖರೀದಿ ಮಾಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ಅವರು ಖರೀದಿ ಮಾಡಿರುವ ಜಾಗಕ್ಕಿಂತ ಹೆಚ್ಚು ಜಾಗದಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃಇರುವುದಿಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು, ತರೀಕೆರೆ.